**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1698 (1905) |
| ಸದಸ್ಯರ ಹೆಸರು | : | ಶ್ರೀ ಡಾ: ಎಂ.ಜಿ. ಮುಳೆ |
| ಉತ್ತರಿಸಬೇಕಾದ ದಿನಾಂಕ | : | 24.03.2026 |
| ಉತ್ತರಿಸಬೇಕಾದ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಆರ್ಥಿಕ ವರ್ಷದಲ್ಲಿ ಬೀದರ್ ಜಿಲ್ಲೆಯ ನಗರಸಭೆಗಳು ಹಾಗೂ ಪುರಸಭೆಗಳಲ್ಲಿ ನಿಗದಿಪಡಿಸಲಾದ ಆಸ್ತಿ ತೆರಿಗೆ ಗುರಿ (Target) ಎಷ್ಟು; ವಾಸ್ತವವಾಗಿ ಸಂಗ್ರಹವಾದ ಮೊತ್ತ ಎಷ್ಟು; ತೆರಿಗೆ ಸಂಗ್ರಹಣೆಯಲ್ಲಿ ಉಂಟಾದ ಅಂತರಕ್ಕೆ (Gap) ಕಾರಣವಾದ ಅಂಶಗಳೇನು; (ನಗರಸಭೆವಾರು ವಿವರ ನೀಡುವುದು) | ಕಳೆದ ಆರ್ಥಿಕ ವರ್ಷದಲ್ಲಿ ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಆಸ್ತಿ ತೆರಿಗೆ ಬೇಡಿಕೆ, ಆಸ್ತಿ ತೆರಿಗೆ ಸಂಗ್ರಹಣೆಯ ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಸದರಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಆಸ್ತಿದಾರರು ಬೇರೆ ಪ್ರದೇಶದಲ್ಲಿ ವಾಸವಾಗಿರುವ ಕಾರಣಕ್ಕಾಗಿ ಹಾಗೂ ಕೊಳಚೆ ಪ್ರದೇಶದಲ್ಲಿನ ಆಸ್ತಿದಾರರು ತೆರಿಗೆ ಪಾವತಿಸದಿರುವ ಕಾರಣಕ್ಕಾಗಿ ತೆರಿಗೆ ಸಂಗ್ರಹಣೆಯಲ್ಲಿ ಅಂತರ ಉಂಟಾಗಿರುತ್ತದೆ. |
| ಆ) | ವರ್ಷಾನುಗಟ್ಟಲೆ ಬಾಕಿ ಇರುವ ಆಸ್ತಿ ತೆರಿಗೆಯನ್ನು ವಸೂಲಿ ಮಾಡಲು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳು ಯಾವುದೇ 'ವಿಶೇಷ ತೆರಿಗೆ ಸಂಗ್ರಹ ಅಭಿಯಾನ' (Tax Collection Drive) ಅಥವಾ ತೆರಿಗೆ ಅದಾಲತ್‌ಗಳನ್ನು ಆಯೋಜಿಸಿರುವುದೇ; ಅತಿ ಹೆಚ್ಚು ತೆರಿಗೆ ಬಾಕಿ ಉಳಿಸಿಕೊಂಡಿರುವ ವಾಣಿಜ್ಯ ಮಳಿಗೆಗಳು / ಸಂಸ್ಥೆಗಳ ವಿರುದ್ಧ ಜಾರಿಗೊಳಿಸಿದ ಕ್ರಮಗಳೇನು; | ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಾರ್ಡ್‌ವಾರು ತೆರಿಗೆ ಸಂಗ್ರಹ ಶಿಬಿರ ಏರ್ಪಡಿಸಿ, ತೆರಿಗೆಯನ್ನು ವಸೂಲಿ ಮಾಡಲು ವಿಶೇಷ ತೆರಿಗೆ ಅಭಿಯಾನ, ಧ್ವನಿವರ್ಧಕ ಹಾಗೂ ಕರಪತ್ರಗಳ ಮೂಲಕ ಪ್ರಚಾರ ಮಾಡಲಾಗುತ್ತಿದೆ ಹಾಗೂ ಅತೀ ಹೆಚ್ಚು ಬಾಕಿ ಉಳಿಸಿಕೊಂಡಿರುವ ಆಸ್ತಿಗಳ ಮಾಲೀಕರಿಗೆ ಬೇಡಿಕೆ ನೋಟೀಸ್ ಜಾರಿ ಮಾಡಲಾಗಿರುತ್ತದೆ.<br><br>ವರ್ಷಾನುಗಟ್ಟಲೆ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಹಾಗೂ ವಾಣಿಜ್ಯ ಮಳಿಗೆಗಳಿಗೆ ಸಂಬಂಧಿಸಿದಂತೆ ಹೆಚ್ಚು ತೆರಿಗೆ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳು ಇರುವುದಿಲ್ಲ. |
| ಇ) | ರಾಜ್ಯ ಸರ್ಕಾರದ Self Assessment Scheme (SAS) ಅಡಿಯಲ್ಲಿ ಆನ್‌ಲೈನ್ ಆಸ್ತಿ ತೆರಿಗೆ ಪಾವತಿ ವ್ಯವಸ್ಥೆಯನ್ನು ಜಿಲ್ಲೆಯ ಎಲ್ಲಾ ನಗರಸಭೆಗಳ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಸಂಪೂರ್ಣವಾಗಿ ಜಾರಿಗೆ ತರಲಾಗಿದೆಯೇ; ಇದ್ದಲ್ಲಿ, ಅದರ ಬಳಕೆ ಪ್ರಮಾಣ ಮತ್ತು ಆನ್‌ಲೈನ್ ಮೂಲಕ ಸಂಗ್ರಹವಾಗಿರುವ ತೆರಿಗೆ ಮೊತ್ತ ಎಷ್ಟು; | ರಾಜ್ಯ ಸರ್ಕಾರದ Self Assessment Scheme (SAS) ಅಡಿಯಲ್ಲಿ ಆನ್‌ಲೈನ್ ಆಸ್ತಿ ತೆರಿಗೆ ಪಾವತಿ ವ್ಯವಸ್ಥೆಯನ್ನು ಬೀದರ್ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಂಪೂರ್ಣವಾಗಿ ಜಾರಿಗೆ ತರಲಾಗಿದೆ.<br><br>ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಳೆದ ವರ್ಷದಲ್ಲಿ ಆನ್‌ಲೈನ್ ಮೂಲಕ ಸಂಗ್ರಹಿಸಲಾದ ಆಸ್ತಿ ತೆರಿಗೆಯ ವಿವರ ಈ ಮುಂದಿನಂತಿದೆ. |

<table>
<tr><td></td><td></td><td>
<table>
<tr><th>ನಗರ ಸ್ಥಳೀಯ ಸಂಸ್ಥೆಗಳು</th><th>ಆಸ್ತಿ ತೆರಿಗೆ ಮೊತ್ತ</th></tr>
<tr><td>ಬಸವ ಕಲ್ಯಾಣ ನಗರಸಭೆ</td><td>20.40 ಲಕ್ಷ</td></tr>
<tr><td>ಭಾಲ್ಕಿ ಪುರಸಭೆ</td><td>28.19 ಲಕ್ಷ</td></tr>
<tr><td>ಹುಮನಾಬಾದ್ ಪುರಸಭೆ</td><td>32.19 ಲಕ್ಷ</td></tr>
<tr><td>ಚಿಟಗುಪ್ಪ ಪುರಸಭೆ</td><td>70.67 ಲಕ್ಷ</td></tr>
<tr><td>ಹಳ್ಳಿಖೇಡ ಪುರಸಭೆ</td><td>34.53 ಲಕ್ಷ</td></tr>
</table>
</td></tr>
<tr><td>ಈ)</td><td>ನಗರ ಪ್ರದೇಶದ ನಾಗರೀಕರಿಗೆ ಜನನ-ಮರಣ ಪ್ರಮಾಣಪತ್ರ, ಆಸ್ತಿ ತೆರಿಗೆ ಪಾವತಿ, ದೂರು ಸಲ್ಲಿಕೆ ಮುಂತಾದ ಸೇವೆಗಳನ್ನು ಒಂದೇ ಸೂರಿನಡಿ ಒದಗಿಸುವ 'ಸಿಟಿಜನ್ ಸರ್ವಿಸ್ ಸೆಂಟರ್' (One Stop Help Center) ಗಳನ್ನು ಜಿಲ್ಲೆಯ ನಗರಸಭೆಗಳಲ್ಲಿ ಸ್ಥಾಪಿಸಲಾಗಿದೆಯೇ; ಇದ್ದಲ್ಲಿ, ಅವುಗಳ ಸಂಖ್ಯೆ ಹಾಗೂ ಸೇವಾ ವ್ಯಾಪ್ತಿ ಎಷ್ಟು;</td><td>ಭಾಲ್ಕಿ ಪುರಸಭೆ, ಹುಮನಾಬಾದ್ ಪುರಸಭೆ ಹಾಗೂ ಚಿಟಗುಪ್ಪ ಪುರಸಭೆಗಳಲ್ಲಿ Help Center ಗಳನ್ನು ಸ್ಥಾಪಿಸಲಾಗಿರುತ್ತದೆ.<br><br>ಬಸವಕಲ್ಯಾಣ ನಗರಸಭೆ ಹಾಗೂ ಹಳ್ಳಿಖೇಡ ಪುರಸಭೆಯಲ್ಲಿ Help Center ಗಳನ್ನು ಸ್ಥಾಪಿಸಲಾಗಿರುವುದಿಲ್ಲ.</td></tr>
<tr><td>ಉ)</td><td>ನಗರಸಭೆಗಳು ಸಂಗ್ರಹಿಸಿದ ತೆರಿಗೆ ಮೊತ್ತವನ್ನು ಆಯಾ ವಾರ್ಡ್‌ಗಳ ಅಭಿವೃದ್ಧಿ ಕಾಮಗಾರಿಗಳಿಗೆ (ರಸ್ತೆ, ಬೀದಿ ದೀಪ, ಚರಂಡಿ ಇತ್ಯಾದಿ) ಎಷ್ಟು ಪ್ರಮಾಣದಲ್ಲಿ ಬಳಸಲಾಗಿದೆ ಎಂಬುದರ ಕುರಿತು ಸಾರ್ವಜನಿಕರಿಗೆ ಪಾರದರ್ಶಕವಾಗಿ ಮಾಹಿತಿ ನೀಡಲು ವಾರ್ಷಿಕ ಕಾರ್ಯಕ್ಷಮತಾ ವರದಿ (Annual Performance Report) ಪ್ರಕಟಿಸಲಾಗುತ್ತಿದೆಯೇ ಅಥವಾ ಅಧಿಕೃತ ವೆಬ್‌ಸೈಟ್ ನಲ್ಲಿ ಅಂಕಿಅಂಶಗಳನ್ನು ಅಪ್‌ಲೋಡ್ ಮಾಡಲಾಗುತ್ತಿದೆಯೇ?</td><td>ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಂಗ್ರಹಿಸಿದ ತೆರಿಗೆ ಮೊತ್ತವನ್ನು ಆಯಾ ವಾರ್ಡ್‌ಗಳ ಅಭಿವೃದ್ಧಿ ಕಾಮಗಾರಿಗಳಿಗೆ (ರಸ್ತೆ, ಬೀದಿ ದೀಪ, ಚರಂಡಿ ಇತ್ಯಾದಿ) ಬಳಸಲಾಗಿರುವ ಕುರಿತು ಸಾರ್ವಜನಿಕರಿಗೆ ಪಾರದರ್ಶಕವಾಗಿ ಮಾಹಿತಿ ನೀಡಲು ವಾರ್ಷಿಕ ಕಾರ್ಯಕ್ಷಮತಾ ವರದಿ (Annual Performance Report) ಆಯಾ ಸ್ಥಳೀಯ ಸಂಸ್ಥೆಗಳ ವೆಬ್ ಸೈಟ್ ನಲ್ಲಿ ಅಪಲೋಡ್ ಮಾಡಲಾಗಿರುತ್ತದೆ.</td></tr>
</table>

**ಸಂಖ್ಯೆ: ನಅಇ 102 ಜಿಇಎಲ್ 2026 (ಇ)**

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು

ಅನುಬಂಧ-1

| | | ಕಳೆದ ವರ್ಷದಲ್ಲಿನ (2024-25) | | |
|---|---|---|---|---|
| ಕ್ರ ಸಂ | ನಗರ ಸ್ಥಳೀಯ ಸಂಸ್ಥೆಗಳು | ಆಸ್ತಿ ತೆರಿಗೆ ಬೇಡಿಕೆ (ಲಕ್ಷಗಳಲ್ಲಿ) | ಆಸ್ತಿ ತೆರಿಗೆ ಸಂಗ್ರಹಣೆ (ಲಕ್ಷಗಳಲ್ಲಿ) | ಕಾರಣಗಳು |
| 1 | ನಗರಸಭೆ ಬಸವಕಲ್ಯಾಣ | 280.7 | 245.84 | ಕೆಲ ನಿವೇಶನಗಳ ಮಾಲೀಕರು ಬೇರೆ ಪ್ರದೇಶದಲ್ಲಿ ವಾಸವಾಗಿದ್ದು ಹಾಗೂ ಕೆಲ ಕೊಳಚೆ ಪ್ರದೇಶದ ನಿವಾಸಿಗಳು ತೆರಿಗೆ ಪಾವತಿಸದಿರುವುದು. |
| 2 | ಪುರಸಭೆ ಭಾಲ್ಕಿ | 207.88 | 206.96 | |
| 3 | ಪುರಸಭೆ ಹುಮ್ನಾಬಾದ್ | 223.37 | 211.19 | |
| 4 | ಪುರಸಭೆ ಚಿಟಗುಪ್ಪ | 86.18 | 86.18 | |
| 5 | ಪುರಸಭೆ ಹಳ್ಳಿಖೇಡ | 32.44 | 32.44 | |

ಸಹಾಯಕ ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು